# ಈಶ್ವರಿ

■ ಡಾ. ಪ್ರೇಮಲತ ಬಿ.
ಚಿತ್ರ: ಭಾವು ಪತ್ತಾರ್

ಹಾಲ್ಬಿಳುಪಿನ ಜವ್ವನೆ ಹುಡುಗಿ. ಪ್ರೀತಿಯೇ ಮೈವೆತ್ತಂತ ಸಪೂರಕಾಯದ ಹುಡುಗ. ಮತ್ತೆ ಎದುರು ಬದುರಾಗಿ ಬರುತ್ತಾರೆ. ಒಬ್ಬರನ್ನೊಬ್ಬರು ಕಣ್ಣಲ್ಲಿ ತುಂಬಿಕೊಳ್ಳುತ್ತ ನಿಲ್ಲುತ್ತಾರೆ. ಅರೆಬಿರಿದ ತುಟಿಗಳಿಂದ ಅಪ್ಪಿ ತಪ್ಪಿಯೂ ಮಾತು ಉದುರುವುದಿಲ್ಲ. ಹಿಂಬದಿಯ ಹಸಿರು ಕಣಿವೆಯಲ್ಲಿ ಏಳುತ್ತಿರುವ ಚಳಿಯ ಮೋಡಗಳು ಅವರನ್ನು ಮುತ್ತಿಕ್ಕಿ ಮುಂದಕ್ಕೆ ಸಾಗುತ್ತ ಎಂಥದ್ದೋ ದುಗುಡವನ್ನೂ ನಿಗೂಢವನ್ನೂ ಸೃಷ್ಟಿಸುತ್ತವೆ. ಅವರ ಸುತ್ತಮುತ್ತ ಮತ್ಯಾರೂ ಇಲ್ಲ. ಈಗಾದರೂ ಒಬ್ಬರನ್ನೊಬ್ಬರು ಅಪ್ಪಿ ಮುತ್ತಿಡಬಾರದೇ? ಎಂದು ಈಶ್ವರಿ ಕಾಯುತ್ತಾಳೆ. ಅವಳ ಸುತ್ತಲೂ ಯಾರೂ ಇಲ್ಲ, ಅವಳ ಮೊಲೆಗಳ ಆಳದಲ್ಲಿ ಪುಳಕವೇಳುತ್ತಿದೆ, ಎದೆ ಚಡಪಡಿಸುತ್ತದೆ... ಹಂಬಲಕ್ಕೂ ಸಹನೆಯ ಮಿತಿಯಿರುತ್ತದಲ್ಲವೆ? ಇದಾಗಲೇ ಹದಿನಾಲ್ಕನೇ ಎಪಿಸೋಡು... ದಿನಕ್ಕೆ ನಾಲ್ಕು ಗಂಟೆ ನೋಡುತ್ತಿದ್ದಾಳೆ.

ಅವಳು ಸೀರಿಯಲ್ ನೋಡುವುದು ಎಳೆಮುಖದ, ನಳಿನ ದೇಹದ ನಾಯಕಿಗೋ ಅಥವಾ ದಪ್ಪ ದನಿಯ, ಬಿಗಿ ಶರೀರದ, ಕಟ್ಟುಮಸ್ತಾದ ದವಡೆಯಿರುವ ಆ ನಾಯಕನಿಗಾಗಿಯೋ ಅವಳಿಗೇ ಗೊತ್ತಿಲ್ಲ. ಅವರಿಬ್ಬರೂ ಒಬ್ಬರನ್ನೊಬ್ಬರು ಬಲವಾಗಿ ತಬ್ಬಲಿ ಎಂದು ಕಾಯುತ್ತಾಳೆ. ಅವರ ತುಟಿಗಳನ್ನು ತೆರೆಯ ಮೇಲೆ ತೋರಿಸುವಾಗ ಈಶ್ವರಿಯ ತುಟಿಗಳು ಬೆಚ್ಚಗಾಗುತ್ತವೆ. ಅವಳು ಅವಳೂ ಅಲ್ಲ, ಅವನೂ ಅಲ್ಲ... ಬರಿಯ ಸನ್ನಿವೇಶದ ಗೊಂಬೆ... ಗೊಂಬೆಯೂ ಅಲ್ಲ, ಅವರಿಬ್ಬರೂ ಅವಳೇ. ಅವಳು ಕಾಯುವುದು ಅವರಿಬ್ಬರ ಪ್ರೀತಿ ಸಾಕ್ಷಾತ್ಕಾರವಾಗುವ ಆ ಸಂದರ್ಭಕ್ಕಾಗಿ, ಅದನ್ನು ಹೃದಯದ ತುಂಬಾ ತುಂಬಿ ಕೊಳ್ಳುವ ತವಕದಲ್ಲಿ. ಇಶ್ಶೀ ಈ ಡೈರೆಕ್ಟರೋ ಸಿಕ್ಕಾಪಟ್ಟೆ ಕಾಯಿಸುತ್ತಿದ್ದಾನೆ.

ಆದರೂ ಈಶ್ವರಿಗೆ ಇದೇ ಹೆಚ್ಚು ಪ್ರಿಯವಾಗುತ್ತದೆ. ನವಿರು ನವಿರಾದ ಪ್ರೇಮ. ಗರಿ ಗರಿಯಾದ ಎಳೆ ಎಳೆಯಾಗಿ ಬಿಡಿಸಿ ಹೇಳುವ ಹೃದಯಗಳ ಸಮಾಗಮ. ಕೂತಲ್ಲೇ ಮಿಡುಕುತ್ತಾಳೆ. ಮೈ ತುಂಬ ಬಟ್ಟೆ ತೊಟ್ಟ ಆ ನಾಯಕಿಯ ಮುಖದ ಚರ್ಮ ಅದೆಷ್ಟು ಚೆನ್ನ. ಆದರೆ ನಾಯಕಿ ಅಷ್ಟು ಸಣ್ಣಗೆ ಇರಬಾರದಿತ್ತು. ಅವನು ನಿಜಕ್ಕೂ ಸಾಚಾ ವ್ಯಕ್ತಿಯೆನಿಸುತ್ತಾನೆ. ಅವಳ ಹೊರತಾಗಿ ಇನ್ನಾರೂ ಬೇಡ ಅವನಿಗೆ...

ಕತ್ತಿಯ ಅಲುಗಿನಂತೆ ಹರಿತವಾಗಿ ಆಳಕ್ಕೆ ಇರಿಯಬಲ್ಲ, ನೋವನ್ನು ಉಳಿಸಬಲ್ಲ, ಅಸಹಾಯಕ ಹಂಬಲದ ರೋದನವನ್ನು ಮೌನದಲ್ಲೇ ಕವಿತೆಯಾಗಿ ಹಾಡಬಲ್ಲ, ಕೂಡಲಾಗದ ಅವರ ಪ್ರೀತಿ ಈಶ್ವರಿಯ ನರ ನರಗಳಲ್ಲೆಲ್ಲ ಪ್ರವಹಿಸಿದಂತಾಗಿ ಅವಳು ವೇದನೆಯಿಂದ ನಿಡುಸುಯ್ಯುತ್ತಾಳೆ. ಆ ರಾತ್ರಿಗಾಗುವಷ್ಟು ಸರಕು! ಅರೆ–ಬರೆ ಎಚ್ಚರವಾದಾಗೆಲ್ಲ ಅವೇ ಸನ್ನಿವೇಶಗಳನ್ನು

